**ದಿನಾಂಕ: 07.12.2023 ರಂದು ಶ್ರೀ ರವಿಕುಮಾರ್ ಎನ್., ಮಾನ್ಯ ವಿಧಾನ ಪರಿಷತ್ ಸದಸ್ಯರು, ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಜಯಪುರ ಜಿಲ್ಲೆಯ ಖಾಸಗಿ ಕಂಪನಿಯ ಮೆಕ್ಕೆಜೋಳ ಸಂಸ್ಕರಣಾ ಘಟಕದಲ್ಲಿ ಸಂಭವಿಸಿದ ಅಪಘಾತದ ಕುರಿತು ಸರ್ಕಾರದ ಉತ್ತರ**

ವಿಜಯಪುರ ಜಿಲ್ಲೆಯ ಮೆ॥ ರಾಜಗುರು ಫುಡ್ಸ್, ಸರ್ವೇ ನಂ: 215, #90, 91, 92 & 93, ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾ, ಅಲಿಯಾಬಾದ್, ಈ ಕಾರ್ಖಾನೆಯಲ್ಲಿ ಸುಮಾರು 250 ಕಾರ್ಮಿಕರನ್ನು (50 ಖಾಯಂ ಮತ್ತು 200 ಗುತ್ತಿಗೆ ಕಾರ್ಮಿಕರು) ನೇಮಿಸಿಕೊಂಡು ಮೆಕ್ಕೆಜೋಳ ಶೇಖರಣೆ ಮತ್ತು ಪ್ಯಾಕಿಂಗ್ ಮಾಡುವ ಉತ್ಪಾದನಾ ಕಾರ್ಯ ಚಟುವಟಿಕೆ ಇರುತ್ತದೆ. ದಿನಾಂಕ: 04.12.2023 ರಂದು ಸಾಯಂಕಾಲ 5.00 ಗಂಟೆ ಸಮಯದಲ್ಲಿ ಸದರಿ ಕಾರ್ಖಾನೆಯಲ್ಲಿ ಅಳವಡಿಸಲಾಗಿದ್ದ ಸುಮಾರು 280 ಮೆಟ್ರಿಕ್ ಟನ್ ಸಾಮರ್ಥ್ಯದ ಮೆಕ್ಕೆಜೋಳ ಶೇಖರಣಾ ಬಿನ್ ಕುಸಿದು ಅದರಡಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ 7 ಕಾರ್ಮಿಕರು ಮೃತಪಟ್ಟಿದ್ದು, 4 ಕಾರ್ಮಿಕರು ಗಾಯಗೊಂಡಿರುತ್ತಾರೆ. ವಿವರ ಈ ಕೆಳಕಂಡಂತಿದೆ:

| ಮೃತಪಟ್ಟ ಕಾರ್ಮಿಕರು | ಗಾಯಗೊಂಡ ಕಾರ್ಮಿಕರು |
|---|---|
| 1. ಶ್ರೀ ರಾಜೇಶ ಮುಖಿಯಾ, ವಯಸ್ಸು: 25 ವರ್ಷ. | 1. ಶ್ರೀ ಸಂಜುಕುಮಾರ, ವಯಸ್ಸು: 23 ವರ್ಷ. |
| 2.ಶ್ರೀ ರಾಮಬ್ರಿಜ್ ಮುಖಿಯಾ, ವಯಸ್ಸು: 29 ವರ್ಷ. | 2.ಶ್ರೀ ಅನಿಲ ಅಖಿಲೇಶ ಮುಖಿಯಾ, ವಯಸ್ಸು: 26 ವರ್ಷ. |
| 3.ಶ್ರೀ ಶಂಭು ಮುಖಿಯಾ, ವಯಸ್ಸು: 26 ವರ್ಷ. | 3.ಶ್ರೀ ಅಖಿಲೇಶ ಮದರೀ ಮುಖಿಯಾ, ವಯಸ್ಸು: 56 ವರ್ಷ. |
| 4.ಶ್ರೀ ರಾಮ ಬಾಲಾಜಿ ಮುಖಿಯಾ,ವಯಸ್ಸು: 38 ವರ್ಷ. | 4.ಶ್ರೀ ರಬೀಶಾ ಕುಮಾರ ಪೋದ್ದಾರ, ವಯಸ್ಸು: 25 ವರ್ಷ. |
| 5.ಶ್ರೀ ಲೋಕು ಯಾದವ, ವಯಸ್ಸು: 56 ವರ್ಷ. | |
| 6.ಶ್ರೀ ಕಿಶನ್‌ಕುಮಾರ್ ಅಖಿಯಾ, ವಯಸ್ಸು: 22 ವರ್ಷ. | |
| 7.ಶ್ರೀ ದುರಳ್‌ಚಂದ ಮುಖಿಯಾ, ವಯಸ್ಸು: 33 ವರ್ಷ. | |

ಅಪಘಾತದ ವಿಷಯ ತಿಳಿದ ಕೂಡಲೆ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಕಾರ್ಖಾನೆಗೆ ಭೇಟಿ ನೀಡಿ, ಕಾರ್ಮಿಕರ ಮೃತ ದೇಹವನ್ನು ಹೊರಗೆ ತೆಗೆಯುವ ಕಾರ್ಯದಲ್ಲಿ ಜಿಲ್ಲಾಡಳಿತ, ಎನ್.ಡಿ.ಎಮ್.ಎ/ಎಸ್.ಡಿ.ಎಮ್.ಎ ರವರೊಂದಿಗೆ ಭಾಗಿಯಾಗಿರುತ್ತಾರೆ. ಕಾರ್ಖಾನೆಯಲ್ಲಿ ಅಳವಡಿಸಿದ್ದ 280 ಮೆಟ್ರಿಕ್ ಟನ್ ಸಾಮರ್ಥ್ಯದ ಮೆಕ್ಕೆಜೋಳ ಶೇಖರಣಾ ಬಿನ್ ಕುಸಿದಿದ್ದು ಇದಕ್ಕೆ ಮುಖ್ಯ ಕಾರಣವೆಂದು ತಿಳಿದು ಬಂದಿದೆ. ಸದರಿ ಅಪಘಾತಕ್ಕೆ ಶೇಖರಣಾ ಬಿನ್‌ಗೆ ಒದಗಿಸಲಾಗಿರುವ ಸ್ಟ್ರಕ್ಚರ್ (Structure) ಭಾರವನ್ನು ತಡೆಯಲು ವಿಫಲವಾಗಿರುವುದು ಕಾರಣವೆಂದು ಪ್ರಾಥಮಿಕ ತನಿಖೆಯಿಂದ ಕಂಡುಬಂದಿರುತ್ತದೆ.

ಗಾಯಗೊಂಡ ಮತ್ತು ಮೃತ ಕಾರ್ಮಿಕರೆಲ್ಲರೂ ಬಿಹಾರ ರಾಜ್ಯಕ್ಕೆ ಸೇರಿದವರಾಗಿರುತ್ತಾರೆ. ಸರ್ಕಾರವು ಮೃತ ಕಾರ್ಮಿಕರಿಗೆ ತಲಾ ರೂ. 2.00 ಲಕ್ಷ ಪರಿಹಾರ ಘೋಷಿಸಿರುತ್ತದೆ ಮತ್ತು ಕಂಪನಿಯಿಂದ ತಲಾ ರೂ. 5.00 ಲಕ್ಷಗಳ ಪರಿಹಾರವನ್ನು ನೀಡುವಂತೆ ಸೂಚಿಸಲಾಗಿರುತ್ತದೆ. ಇದಲ್ಲದೇ ಗಾಯಗೊಂಡ ಕಾರ್ಮಿಕರಿಗೆ ಸರ್ಕಾರದ ವತಿಯಿಂದ ರೂ. 50,000/- ಮತ್ತು ಕಂಪನಿ ವತಿಯಿಂದ ರೂ. ತಲಾ ರೂ. 2.00 ಲಕ್ಷಗಳ ಪರಿಹಾರವನ್ನು ಘೋಷಿಸಲಾಗಿರುತ್ತದೆ. ಮೃತ ದೇಹಗಳನ್ನು ಅವರ ಸ್ವಂತ ಊರಿಗೆ ಸಾಗಿಸಲು ಜಿಲ್ಲಾಡಳಿತವು ವ್ಯವಸ್ಥೆ ಮಾಡಿರುತ್ತದೆ.

ಕಾರ್ಖಾನೆಯಲ್ಲಿ ಅಳವಡಿಸಿ ಉಪಯೋಗಿಸಲಾಗುತ್ತಿರುವ ಇತರ ಮೆಕ್ಕೆಜೋಳ ಶೇಖರಣಾ ಬಿನ್‌ಗಳನ್ನು ಉಪಯೋಗಕ್ಕೆ ತೆಗೆದುಕೊಳ್ಳದಂತೆ ಸೂಚಿಸಿ ಈಗಾಗಲೆ ನಿಷೇಧಾಜ್ಞೆಯನ್ನು ಕಾರ್ಖಾನೆಗಳ ಕಾಯ್ದೆ 1948 ರಡಿಯಲ್ಲಿ ಜಾರಿಗೊಳಿಸಲಾಗಿರುತ್ತದೆ. ಈ ರೀತಿಯ ಅಪಘಾತಗಳು ಸಂಭವಿಸದಂತೆ ಕಾರ್ಮಿಕ ಇಲಾಖೆಯಿಂದ ಪರಿವೀಕ್ಷಣೆ ನಡೆಸಿ ಕಾರ್ಖಾನೆಗಳಲ್ಲಿ ಅಳವಡಿಸಿ ಉಪಯೋಗಿಸಲಾಗುತ್ತಿರುವ ಶೇಖರಣಾ ಬಿನ್‌ಗಳನ್ನು ಪರಿಶೀಲಿಸಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಸೂಚನೆಗಳನ್ನು ನೀಡಲಾಗಿದೆ. ಹಾಗೂ ಸದರಿ ಕಾರ್ಖಾನೆಯ ಮಾಲೀಕರ ವಿರುದ್ಧ ಕಾರ್ಖಾನೆಗಳ ಕಾಯ್ದೆ 1948 ಮತ್ತು ಇತರೆ ಕಾರ್ಮಿಕ ಕಾನೂನುಗಳ ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ನ್ಯಾಯಾಲಯಗಳಲ್ಲಿ ಹೂಡಲು ಕ್ರಮ ವಹಿಸಲಾಗಿದೆ.

ಸಂಖ್ಯೆ:ಕಾಇ 553 ಎಲ್ಇಟಿ 2023

(ಸಂತೋಷ್ ಎಸ್. ಲಾಡ್)
ಕಾರ್ಮಿಕ ಸಚಿವರು.